## ‘ರಿಕ್ಕಿ’ಯ ಹಾಡು-ಹಸೆ



2016ರ ಬಹು ನಿರೀಕ್ಷಿತ ಚಿತ್ರಗಳಲ್ಲಿ ಒಂದಾದ ‘ರಿಕ್ಕಿ’ ತೆರೆ ಕಾಣಲು ಸಿದ್ಧತೆ ನಡೆಸುತ್ತಿದ್ದು, ಅದಕ್ಕೆ ಮುನ್ನುಡಿಯ ರೂಪದಲ್ಲಿ ಕಳೆದ ವಾರ ಗೀತೆಗಳ ಧ್ವನಿಮುದ್ರಿಕೆಯನ್ನು ಬಿಡುಗಡೆ ಮಾಡಿದೆ. ರಿಷಬ್ ಶೆಟ್ಟಿ ನಿರ್ದೇಶನದ ಈ ಚಿತ್ರ ಕಮರ್ಷಿಯಲ್ ನೆಲೆಗಟ್ಟಿನಲ್ಲಿಯೇ ನಕ್ಸಲಿಸಂನಂಥ ಗಂಭೀರ ವಿಷಯವನ್ನು ನಿರೂಪಿಸಲು ಪ್ರಯತ್ನಿಸಿದೆ ಎನ್ನಲಾಗಿದೆ.

ಎಸ್.ವಿ. ಬಾಬು ನಿರ್ಮಾಣದ ‘ರಿಕ್ಕಿ’ಯ ಹಾಡುಗಳ ಸೀಡಿ ಬಿಡುಗಡೆ ಕಾರ್ಯಕ್ರಮ ವರ್ಣರಂಜಿತವಾಗಿಯೂ ಅರ್ಥಪೂರ್ಣವಾಗಿಯೂ ಇದ್ದುದು ವಿಶೇಷ. ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷರುಗಳು, ರಾಜಕಾರಣಿಗಳ ಜೊತೆಗೆ ಹಿರಿಯ ನಿರ್ಮಾಪಕಿ ಪಾರ್ವತಮ್ಮ ರಾಜಕುಮಾರ್ ಅವರನ್ನು ಚಿತ್ರತಂಡ ಗೌರವಿಸಿದ್ದು ಕಾರ್ಯಕ್ರಮಕ್ಕೆ ವಿಶೇಷ ಆಯಾಮ ತಂದುಕೊಟ್ಟಿತ್ತು. ಧ್ವನಿಮುದ್ರಿಕೆ ಬಿಡುಗಡೆ ಮಾಡಿದ ಪಾರ್ವತಮ್ಮ– ಹೊಸ ಪ್ರತಿಭೆಗಳ ಸಂಗಮದ ‘ರಿಕ್ಕಿ’ಗೆ ಯಶಸ್ಸು ಕೋರಿದರು. ಇದೇ ಸಂದರ್ಭದಲ್ಲಿ ನಡೆದ ನೃತ್ಯ ಕಾರ್ಯಕ್ರಮಗಳು ಹಾಗೂ ಚಿತ್ರದ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರು ನಡೆಸಿಕೊಟ್ಟ ಸಂಗೀತ ಕಾರ್ಯಕ್ರಮ ನೋಡುಗರ ಗಮನಸೆಳೆಯಿತು.

ರಕ್ಷಿತ್ ಶೆಟ್ಟಿ ಮತ್ತು ಹರಿಪ್ರಿಯಾ ಮುಖ್ಯಪಾತ್ರಗಳಲ್ಲಿ ನಟಿಸಿರುವ ‘ರಿಕ್ಕಿ’ಯಲ್ಲಿ ಅಚ್ಯುತ್ ಕುಮಾರ್, ಕಿಶೋರ್, ಪ್ರಮೋದ್, ಮುಂತಾದವರು ನಟಿಸಿದ್ದಾರೆ.



## ‘ಮದುವೆ’ಗೆ ಕವಿರಾಜ್ ಕರೆಯೋಲೆ

ಯುವ ಜೋಡಿ ಅಮೂಲ್ಯ ಹಾಗೂ ಸೂರಜ್ ಗೌಡ ಕನ್ನಡ ಚಿತ್ರರಸಿಕರಿಗೆ ‘ಮದುವೆಯ ಮಮತೆಯ ಕರೆಯೋಲೆ’ ನೀಡುತ್ತಿದ್ದಾರೆ. ಹಾಂ, ಈ ಕರೆಯೋಲೆ ಸಿನಿಮಾಕ್ಕೆ ಸಂಬಂಧಿಸಿದ್ದು. ಕವಿರಾಜ್ ನಿರ್ದೇಶನದ ಈ ಸಿನಿಮಾ ಜ. 8ರಂದು ತೆರೆ ಕಾಣುತ್ತಿದೆ.

ಅಮೂಲ್ಯ ಅವರಿಗೆ ಇದು ಹನ್ನೊಂದನೇ ಸಿನಿಮಾ. ಈ ಚಿತ್ರದ ಶೂಟಿಂಗ್ ನನ್ನ ಇದುವರೆಗಿನ ಚಿತ್ರಗಳಿಗಿಂತಲೂ ಹೆಚ್ಚು ಖುಷಿ ನೀಡಿತು ಎನ್ನುವ ಅಮೂಲ್ಯ ‘ಮದುವೆ ಮನೆ’ಯ ಗುಂಗನ್ನು ಇನ್ನೂ ಉಳಿಸಿಕೊಂಡಂತೆ ಮಾತನಾಡುತ್ತಾರೆ. ಮೈಸೂರಿನ ಹುಡುಗ ಸೂರಜ್‌ಗೆ ಇದು ಮೊದಲ ಸಿನಿಮಾ. ದರ್ಶನ್ ಅಭಿಮಾನಿಯಾದ ಅವರಿಗೆ, ತಮ್ಮ ನೆಚ್ಚಿನ ನಟನ ನಿರ್ಮಾಣ ಸಂಸ್ಥೆಯಲ್ಲಿ ಅಭಿನಯಿಸಿದ ಪುಲಕ. ಅನಂತನಾಗ್ ಅವರಂಥ ಹಿರಿಯ ಕಲಾವಿದರ ಜೊತೆ ತೆರೆಹಂಚಿಕೊಂಡಿದ್ದು ಹಾಗೂ ನಟನೆಯ ಟಿಪ್ಸ್‌ಗಳನ್ನು ಪಡೆದಿದ್ದು ಸೂರಜ್‌ಗೆ ಖುಷಿ ಕೊಟ್ಟಿದೆ.

ಅಂದಹಾಗೆ, ‘ಮದುವೆಯ ಮಮತೆಯ ಕರೆಯೋಲೆ’ ಗೀತರಚನೆಕಾರ ಕವಿರಾಜ್ ಅವರ ನಿರ್ದೇಶನದ ಚೊಚ್ಚಿಲ ಸಿನಿಮಾ. ಚಿತ್ರಕಥೆ ರೂಪಿಸಿಕೊಂಡು ಸಿನಿಮಾ ಕನಸು ಕಾಣುತ್ತಿದ್ದ ಕವಿರಾಜ್ ಯಾವುದೋ ಸಂದರ್ಭದಲ್ಲಿ ತೂಗುದೀಪ ದಿನಕರ್‌ಗೆ ಕಥೆ ಹೇಳಿದ್ದಾರೆ. ಸ್ವತಃ ನಿರ್ದೇಶಕರೂ ಆದ ದಿನಕರ್‌ಗೆ, ಕವಿರಾಜ್ ಹೇಳಿದ ಕಥೆ ಅದೆಷ್ಟು ಇಷ್ಟವಾಯಿತೆಂದರೆ, ತಕ್ಷಣವೇ ಬಂಡವಾಳ ಹೂಡಲು ಹೂಂ ಎಂದಿದ್ದಾರೆ. ಚಿತ್ರಕಥೆ ಮತ್ತು ಸಿನಿಮಾದ ಬಗ್ಗೆ ಕವಿರಾಜ್ ಅವರಿಗಿದ್ದ ಸ್ಪಷ್ಟತೆ ಕೂಡ ಅವರ ಗಮನಸೆಳೆದಿದೆ. ‘ಸಿನಿಮಾ ಸೊಗಸಾಗಿ ಮೂಡಿಬಂದಿದೆ. ಕವಿರಾಜ್‌ರ ಮೊದಲ ಸಿನಿಮಾ ಎನ್ನುವ ಕುರುಹು ಚಿತ್ರದಲ್ಲೆಲ್ಲೂ ಇಲ್ಲ’ ಎನ್ನುವುದು ದಿನಕರ್ ಬಣ್ಣನೆ.

ಚಿಕ್ಕಣ್ಣ, ಚಿತ್ರಾ ಶೆಣೈ, ಅಚ್ಯುತ್ ಕುಮಾರ್, ಪಾಪ ಪಾಂಡು ಶಾಲಿನಿ, ಸುಂದರ್ ತಾರಾಗಣದಲ್ಲಿರುವ ಇತರ ಪ್ರಮುಖರು.

■ ರಘು